ಯಾದಗಿರಿ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಅವರು ಭಾಗವಹಿಸಿದ ಇಂಥ ಚಳವಳಿಗಳು ಅನೇಕ. 1979ರಲ್ಲಿ ಕಲಬುರಗಿ ಜಿಲ್ಲೆಯ ಚುಂಚೂರು ಮಹಾಪುರ ತಾಯಿಯ ದೇವಸ್ಥಾನದಲ್ಲಿ ನಡೆಯುತ್ತಿದ್ದ ಬೆತ್ತಲೆಪೂಜೆಯನ್ನು ವಿರೋಧಿಸಿ ನಡೆಸಿದ ಚಳವಳಿ, 1980ರಲ್ಲಿ ರಾಯಚೂರು ಜಿಲ್ಲೆಯ ಅರೋಲಿಯ ಹುಲಿಗೆಮ್ಮ ದೇವಿಯ ಜಾತ್ರೆಯಲ್ಲಿ ಬೆತ್ತಲೆಸೇವೆಯನ್ನು ನಿಷೇಧಿಸುವಂತೆ ನಡೆಸಿದ ಚಳವಳಿ, 1981ರಲ್ಲಿ ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿಯಲ್ಲಿನ ಬೆತ್ತಲೆಸೇವೆ ವಿರೋಧಿಸಿ ನಡೆದ ಜಾಥಾ, 1985ರಲ್ಲಿ ಕುದುರೆಮೋತಿ ಹೋರಾಟ, 1986ರಲ್ಲಿ ರಾಯಚೂರಿನಲ್ಲಿ ಕಾರ್ಮಿಕರ ಪರವಾಗಿ ನಡೆಸಿದ ಹೋರಾಟಗಳು, 1989ರಲ್ಲಿ ಲಿಂಗಸೂರು ತಾಲ್ಲೂಕಿನ ಮೆದಿಕಿನಾಳ ಗ್ರಾಮದಲ್ಲಿ ನಡೆಸಿದ ಭೂಹೋರಾಟ – ಹೀಗೆ ಚೆನ್ನಣ್ಣ ವಾಲೀಕಾರರು ನಿರಂತರವಾಗಿ ಜಾಥಾ, ಹೋರಾಟಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಬಸ್‌ಸ್ಟ್ಯಾಂಡ್, ಯಾರದೋ ಮನೆಯ ಅಂಗಳ, ಶಾಲೆಕಾಲೇಜುಗಳ ಕೋಣೆ ಅಥವಾ ಕಟ್ಟೆ, ರೈಲುನಿಲ್ದಾಣ, ಇವೇ ಅವರ ವಸತಿಗೃಹಗಳು. ಒಮ್ಮೊಮ್ಮೆ ಮನೆಯಿಂದಲೇ ರೊಟ್ಟಿಬುತ್ತಿಯ ಗಂಟು ಹೊತ್ತುಕೊಂಡು ಹೋಗುತ್ತಿದ್ದರು. ಇಲ್ಲವಾದರೆ ಯಾರಾದರೂ ತಂದುಕೊಟ್ಟರೆ ಅದೇ ಊಟ. ತಾನು ಮಾಡಿದ್ದನ್ನು ಎಲ್ಲಿಯೂ ಹೇಳಿಕೊಳ್ಳುತ್ತಿರಲಿಲ್ಲ. ಅಲ್ಲಿ ನಡೆದ ಪ್ರಸಂಗಗಳು ಮುಂದೆ ಕಥೆ, ಕಾವ್ಯ, ನಾಟಕಗಳಾಗಿ ಬದಲಾಗುತ್ತಿದ್ದವು. ಹೈದ್ರಾಬಾದ್ ಕರ್ನಾಟಕದ ಯಾವ್ಯಾವ ಹಳ್ಳಿಗಳಲ್ಲಿ ದಲಿತರ ಕಗ್ಗೊಲೆಯಾಗಿದೆಯೊ ಅಲ್ಲಿಗೆ ವಾಲೀಕಾರರು ದೌಡಾಯಿಸಿದರು. ಅತ್ಯಾಚಾರಕ್ಕೊಳಗಾದ ಹೆಣ್ಣುಮಕ್ಕಳಿಗೆ ಸಾಂತ್ವನ ಹೇಳಿಬಂದರು. ಅಲ್ಲಿ ಕಲೆ ಹಾಕಿದ ಮಾಹಿತಿ ಮುಂದೆ ಅವರಲ್ಲಿ ಕಥನಗೀತೆಗಳಾದವು, ಡಪ್ಪಿನಾಟಗಳಾದವು. ಅವರ ಕವಿತೆಗಳಲ್ಲಿ ಹತ್ಯೆಗೊಳಗಾದ ದಲಿತರ ಚರಿತ್ರೆಯಿದೆ. ಅತ್ಯಾಚಾರಕ್ಕೊಳಗಾದ ಹೆಣ್ಣುಮಕ್ಕಳ ಮೂಕವೇದನೆಯಿದೆ. ವಾಲೀಕಾರರು ತಮ್ಮ ಕಥೆ, ಕಾವ್ಯಗಳಲ್ಲಿ ಇನ್ನೊಂದು ಪರ್ಯಾಯ ಚರಿತ್ರೆ ಬರೆದುಬಿಟ್ಟಿದ್ದರು. ಈಗ ಓದಿದರೆ ಇದೆಲ್ಲ ಎಂಥ ಸಾಹಸದ ಕೆಲಸ ಎಂದು ವಿಸ್ಮಯ ಉಂಟಾಗುತ್ತದೆ. ಬಂಡಾಯ ಸಾಹಿತ್ಯ ಸಂಘಟನೆಯ ರಾಜ್ಯಸಂಚಾಲಕರಾಗಿ ಕೂಡ ಕಾರ್ಯನಿರ್ವಹಿಸಿದರು. ಅವರ ವ್ಯಕ್ತಿತ್ವಕ್ಕೆ ಹೀಗೆ ಹಲವಾರು ಮುಖಗಳಿವೆ.

ಅವರಿಗೆ ತುಂಬಾ ಇಷ್ಟವಾದ ಪ್ರಕಾರ ಕಾವ್ಯ. ಎಂಬತ್ತರ ದಶಕದಲ್ಲಿ ಶುರುವಾದ ದಲಿತ ಬಂಡಾಯ ಚಳವಳಿ ಅವರ ಕಾವ್ಯಕ್ಕೆ ಹೊಸ ದಿಕ್ಕು ದೆಸೆಗಳನ್ನು ತೋರಿಸಿತು. ಹೀಗಾಗಿಯೇ ಕಾವ್ಯ ಅವರಿಗೆ ಪ್ರತಿಭಟನೆಯ ಅಸ್ತ್ರವಾಯಿತು. ದಲಿತ ಮತ್ತು ಬಡಜನತೆಯ ಮೇಲಾಗುವ ಅನ್ಯಾಯ, ಶೋಷಣೆಗಳನ್ನು ಕಾವ್ಯವಾಗಿಸಿದರು. ಫ್ಯೂಡಲ್ ಜಗತ್ತಿನ ಅನಾಚಾರಗಳನ್ನು ಖಂಡಿಸಿದರು. ಹಲವು ಶತಮಾನಗಳಿಂದ ಶೋಷಣೆಗೊಳಗಾದವರ ಚರಿತ್ರೆಯೇ ಅವರ ಕಾವ್ಯದ ಚರಿತ್ರೆಯಾಗಿಬಿಟ್ಟಿತು. ಇದೆಲ್ಲವನ್ನು ಅರ್ಥಮಾಡಿಕೊಳ್ಳಲು ಅಂಬೇಡ್ಕರ್‌ವಾದ ಅವರ ನೆರವಿಗೆ ಬಂದಿತ್ತು. ಇಲ್ಲಿಂದ ಪಡೆದ ದೃಷ್ಟಿಕೋನಗಳು ಅವರ ಕಾವ್ಯಭಾಷೆಯನ್ನು ರೂಪಿಸಿದ್ದವು. ಅವರಿಗಿದ್ದ ಜಾನಪದದ ಸಮೃದ್ಧ ತಿಳಿವಳಿಕೆ ಕೂಡ ಅವರ ಕಾವ್ಯದ ಧಾಟಿ ಮತ್ತು ರೂಪಕಗಳಿಗೆ ಕಾರಣವಾಯಿತು. ಜಾನಪದದ ಭಾಷೆ ಮತ್ತು ಅಂಬೇಡ್ಕರವಾದದ ವೈಚಾರಿಕತೆ ಅವರ ಕಾವ್ಯವ್ಯಕ್ತಿತ್ವವನ್ನು ನಿರ್ಮಿಸಿತು.

ವಾಲೀಕಾರರು ಅಂಬೇಡ್ಕರರ ಕುರಿತು ಬರೆದ ಹಾಡುಗಳು ಚಳವಳಿಗಳಲ್ಲಿ ಮತ್ತೆ ಮತ್ತೆ ಮೊಳಗಿದವು. ಅವರ ಕವಿತೆಗಳಲ್ಲಿ ಜನಪದ ಜೀವನದ ಚಿತ್ರಗಳು ಯಥೇಚ್ಛ ಒಳಬಂದವು. ಪುರಾಣ, ಚರಿತ್ರೆ, ವರ್ತಮಾನ ಯಾವುದರ ಬಗ್ಗೆ ಬರೆದರೂ ಅದಕ್ಕೆ ಆಧುನಿಕ ವೈಚಾರಿಕ ಸ್ಪರ್ಶ ನೀಡುತ್ತಿದ್ದರು. ತಮ್ಮ ಕಾಲದ ಕವಿತೆಗಳನ್ನಾಗಿಸಿ ಅವುಗಳನ್ನು ಹಿಗ್ಗಿಸುತ್ತಿದ್ದರು. ದ್ರೌಪದಿ, ದುರ್ಯೋಧನ, ಉತ್ತರೆ, ಹಿಡಿಂಬೆಯರ ಸಂಕಟವನ್ನು ಹೊಸದಾಗಿ ಕಾಣಿಸಿದರು. ಗಂಡುಲೋಕ ಎಸಗಿದ ಅನ್ಯಾಯವನ್ನು 'ದ್ರೌಪದಿ' ಕವಿತೆ ಕಾಣಿಸಿದರೆ, ದುರ್ಯೋಧನನ ರೋಷ ಆವೇಶವನ್ನು ಇನ್ನೊಂದು ಕವಿತೆ ಕಾಣಿಸಿದೆ. ಜನಪ್ರಿಯ ಪಾತ್ರಗಳ ಇಲ್ಲಿಯವರೆಗಿನ ಪ್ರಭಾವಳಿಯನ್ನು ಕಳಚುವುದು ಅವರ ಕಾವ್ಯಲೋಕದ ಇನ್ನೊಂದು ಮುಖ್ಯ ನಡೆಯಾಗಿತ್ತು. ದ್ರೌಪದಿಯ ಬಗ್ಗೆ ಬರೆದಷ್ಟೆ ಸಹಜವಾಗಿ ಅವರು ಮಾದರ ಸಾಬವ್ವನ ಬಗ್ಗೆ ಕೂಡ ಬರೆದರು. ಗೆಳತಿ ಪೀರವ್ವನ ಹಾಡು, ಗೆಳತಿ ಇಜ್ಜವ್ವನ ಹಾಡು, ಸೂಳೆ ಎಂಕಮ್ಮನ ಹಾಡುಗಳಲ್ಲಿ ಹೆಣ್ಣುಕುಲದ ಅವಮಾನಗಳಿಗೆ ದನಿ ನೀಡಿದರು.